ಜಾತ್ರಿಗಿ ಶಿವಾನಂದ ಭಾರತಿ ಅಪ್ಪಗೋಳು ಪ್ರವಚನ ಕೊಡ್ಲಿಕ್ಕಂತ ಬಂದಿದ್ರು. ಆಗ, ಅವ್ರ ಪ್ರವಚನ ಕೇಳ್ಲಿಕ್ಕಂತ ನಾನೂ ಹೋಗಿದ್ದೆ. ಆ ದಿನ ಪ್ರವಚನ ಮುಗುದ್ಮ್ಯಾಲೆ ಶಿವಾನಂದ ಭಾರತಿ ಅಪ್ಪಗೋಳು ನನ್ನ ವೇದಿಕೆ ಮ್ಯಾಲೆ ಕರದು ಆಶೀರ್ವಾದ ಮಾಡಿದ್ರು. ಹಂಗs ನನ್ನ ಸೋತ ರೂಪ ನೋಡಿ ಹಳಹಳಿಸ್ಲಿಕ್ಕತ್ತಿದ್ರು. ಒಂದು ರೀತಿ ಮುಖ ಮಾಡಿ ಚಡಪಡಿಸ್ದಂಗ ಮಾಡ್ಲಿಕ್ಕತ್ತಿದ್ರು! ಇದನ್ನೆಲ್ಲ ನೋಡಿ ನನ್ನ ಎದಿ ತುಂಬಿ ಬಂತು. ಹಿಂಗಾಗಿ, ನನ್ನ ದುಃಖ ತಡ್ಕೋಲಿಕ್ಕಾಗದs ಕಣ್ಣಾಗ ನೀರ ತುಂಬುಕೊಂಡು ಬಿಕ್ಕಳಸ್ಲಿಕ್ಕೆ ಶುರು ಮಾಡ್ದೆ! ಆ ವ್ಯಾಳ್ಯೆದಾಗ, ಶಿವಾನಂದ ಭಾರತಿ ಅಪ್ಪಗೋಳು ನನ್ನ ಪರಿಸ್ಥಿತಿ ಕಂಡು, 'ಕಲ್ಲವ್ವ, ಎಟ್ಟ ದಿನ ಅಂತ ಒಬ್ಬಕಿನs ಜಲುಮ ತೆಗೀತಿ!? ನಮಗೆಲ್ಲ ನಿನ್ನ ತ್ರಾಸು ನೋಡ್ಲಿಕ್ಕಾಗವಲ್ದು. ನಾವೆಲ್ಲ ನಿನ್ನ ಪಾಲಿಗೆ ಸತ್ತೀವಂತ ತಿಳಿದಿದ್ದೆನು!? ನಿನ್ನ ಕಷ್ಟಕ್ಕ ಆಗದಿದ್ರ ಈ ಮಠ ಇದ್ದರೆ ಏನು ಸಾರ್ಥಕ ಆದಂಗಾತು? ಮುಪ್ಪು ಅಡರಿದ ಜೀವ ನಿಂದು. ಈ ವಯಸ್ಸಿನ್ಯಾಗ ಜಡ್ಡು ಜಾಪತ್ರೆ ಅಂತ ಏನರೆ ಬಂದ್ರ ಏನು ಮಾಡ್ತಿ? ಆ ಮನ್ಯಾಗ ಒಬ್ಬಕಿನs ಒದ್ಯಾಡಿ ಸತ್ತು ಹೋಗ್ಬೇಕಂತ ಮಾಡಿದ್ದೆನು? ಈ ಹೇಸಿ ಮನುಷ್ಯ ಜಲುಮ ಭಾಳ ಕೆಟ್ಟದ್ದವ್ವ! ಯಾರಿಗಿ ಯಾವಾಗ ಎಂಥ ಪರಿಸ್ಥಿತಿ ತಂದು ಇಡ್ತೈತೆಂತ ಗೊತ್ತಾಗಿಲ್ಲ! ಯಾರ ಆಸ್ರ ಇಲ್ದನs ಈ ಜನುಮನ ಚೆಂದಂಗಿ ಈಸಿ ದಡ ಸೇರೂದು ಅದೇನು ಸಾಮಾನ್ಯದ ಮಾತಂತ ತಿಳಿದಿದ್ದೆನು? ಕಲ್ಲವ್ವ, ನಿನ್ಗ ಒಂದು ಮಾತು ಹೇಳ್ತೀನಿ ಕೇಳು...! ನೀನು ಪ್ರವಾಹದ ವಿರುದ್ಧ ಈಜತೀನಿ ಅನ್ನೂದು ಹುಚ್ಚುತನ ಅನ್ನೂದು ಮರೀಬ್ಯಾಡ. ಅಂಥ ಹುಚ್ಚತನ ಬಿಟ್ಬಿಡು. ಈ ಮಠನs ನಿನ್ನ ಮನೆ, ದೇವ್ರಕೊಂಡಜ್ಜನs ತಂದೆ- ತಾಯಿ ಅಂತ ತಿಳ್ಕೊಂಡು ಅವುನ ಸೇವಾ ಮಾಡ್ಕೊಂತ ಮಠದಾಗನs ಬಂದು ಇದ್ಬುಡು. ಇಲ್ಲಿ, ನೀನು ದಿಕ್ಕಿಲ್ಲದ ಪರದೇಶಿ, ನೀನು ಅನಾಥ ಅನ್ನೋ ಭಾವನೆನs ನಿನ್ಗ ಬರಂಗಿಲ್ಲ. ಒಂದು ರೀತಿಲೆ ನಿನ್ನ ಕಷ್ಟ ಸುಖ, ಜಡ್ಡು ಜಾಪತ್ರೆ, ಆಸ್ರ ಬ್ಯಾಸ್ರಕ್ಕೆಲ್ಲ ದೇವ್ರಕೊಂಡಜ್ಜನ ಈ ಮಠ ಆಸ್ರಾಗಿರತೈತಿ! ಈ ಮಠದ ಮ್ಯಾಲೆ ನಂಬಿಕೆ ಇಟ್ಟು ಬಂದು ಇದ್ಬುಡು.ಯಾಕಂದ್ರ, ಈ ವಯಸ್ಸಿನ್ಯಾಗ ನೀ ಕಷ್ಟ ಪಡೂದು ನಮಗೆಲ್ಲ ಚೆಂದ ಕಾಣ್ಸವಲ್ದು. ಹಂಗತನs ಆ ದೇವ್ರಕೊಂಡಜ್ಜನs ನನ್ನ ನಾಲಿಗೆ ಮ್ಯಾಲೆ ಈ ಮಾತಿಟ್ಟು ನುಡಿಸ್ಯಾನು...' ಅಂತಂದ್ರು. ಆ ವ್ಯಾಳ್ಯೆದಾಗ ಶಿವಾನಂದ ಭಾರತಿ ಅಪ್ಪಗೋಳ ಅಂದ ಆ ಮಾತು ಕೇಳಿ ನನ್ನ ಎದಿ ತುಂಬಿ ಬಂತು. ಆಗ, 'ಎಲ್ರೂ ಕೈ ಬಿಟ್ರೂ ಆ ದೇವ್ರಕೊಂಡಜ್ಜ ಮಾತ್ರ ನನ್ನ ಕೈ ಬಿಡ್ಲಿಲ್ಲಂತ ನನ್ಗ ಅನ್ನಿಸ್ತು...' ಎಂದವಳೆ ನಿಟ್ಟುಸುರೊಂದನ್ನು ಬಿಟ್ಟು, ತುಂಬಿ ಬಂದ ಕಣ್ಣೀರನ್ನು ತನ್ನ ಸೆರಗಿನಿಂದ ಒರೆಸಿಕೊಂಡಳು. ಹಾಗೇ ಕತ್ತು ಮೇಲೆತ್ತಿ ಗೋಡೆಯ ಮೇಲಿದ್ದ ದೇವರಕೊಂಡಜ್ಜನ ಫೋಟಕ್ಕೆ ಕೈಮುಗಿದಳು. ಅರೆಗಳಿಗೆ ಆ ಫೋಟವನ್ನೇ ದಿಟ್ಟಿಸಿ ನೋಡಿದ ಕಲ್ಲವ್ವನಿಗೆ ಆ ಗಳಿಗೆಯಲ್ಲಿ ಅದೇನನ್ನಿಸಿತೋ ಏನೋ ಎಂಬಂತೆ ಸರಕ್ಕನೆ ನನ್ನತ್ತ ತಿರುಗಿ,

'ಮಲ್ಲಣ್ಣ, ನಿನ್ಗ ಒಂದ್ಮಾತು ಹೇಳ್ತೀನಿ ಕೇಳು... ನಾನು ಈಗ ಒಂದು ನಿರ್ಧಾರಕ್ಕೆ ಬಂದೀನಿ. ಅದೇನಂದ್ರ ದೇವ್ರಕೊಂಡಜ್ಜನ ಚಾಕ್ರಿ ಮಾಡ್ಕೊಂತ ಮಠದಾಗನs ಹೋಗಿ ಇರಬೇಕಂತ ಮಾಡೀನಿ! ಯಾಕಂದ್ರ, ಈ ಹೇಸಿ ಜಲುಮಕ್ಕ ಬಂದು ಇದುವರೆಗೂ ಬರೀ ತ್ರಾಸ್ನs ಉಂಡಿನಿ. ನನ್ನ ಹಣೇಬರದಾಗ ಅವ್ವಪ್ಪ ಸುಖ ಇಲ್ಲ, ಅಣ್ತಮ್ಮರ ಸುಖ ಇಲ್ಲ, ಗಂಡನ ಸುಖ ಇಲ್ಲ... ಹಿಂಗ ಯಾವ ಸುಖನೂ ನಾನು ಉಣ್ಲಿಲ್ಲ! ಅದಕ್ಕs, ಸಂಬಂಧಿಕರಂದ್ರ ನನ್ಗ ಹೇಸಿಗಿ ಬಂದಂಗ ಆಗ್ಲಿಕ್ಕತ್ತೆದ! ಅಂಥಾದ್ರಾಗ, ಈ ಮುಪ್ಪಿನ ಕಾಲ್ದಾಗಂತೂ ನಾ ಯಾರಿಗೂ ಭಾರ ಆಗಿರಬಾರದು ಅಂತ ಮನಸ್ಸು ಮಾಡಿನಿ. ಅದಲ್ಲದs, ಗಂಡನ ಮನ್ಯಾಗ ನನ್ನ ಪಾಲಿಗೆ ಬರಬೇಕಿದ್ದ ಒಡಕಿ ಮ್ಯಾಲಿನ ಎರಡೆಕರೆ ಜಮೀನ ಈ ಮಠಕ್ಕನs ಬರುದು ಕೊಡ್ಬೇಕಂತ ನಿರ್ಧಾರ ಮಾಡೀನಿ! ಇದರ ಬಗ್ಗೆ ಶಿವಾನಂದ ಭಾರತಿ ಅಪ್ಪಗೋಳ ಕೂಡನೂ ಮಾತಾಡಿನಿ. ಅವ್ರು, ನಿನ್ನ ಇಚ್ಛಾ ಹೆಂಗೈತೆಲ್ಲ ಹಂಗs ಆಗಲಿ ಅಂತ ಅಂದಾರು. ನೀ ಮಾತ್ರ ಯಾವುದಕ್ಕೂ ತಪ್ಪು ತಿಳೀಬ್ಯಾಡ...' ಎಂದು ಕಲ್ಲವ್ವ ಕಡ್ಡಿ ತುಂಡು ಮಾಡಿದಂತೆ ಅಂದಳು.

ಆಗ, ಆ ಮಾತುಗಳನ್ನು ಕೇಳಿಸಿಕೊಳ್ಳುತ್ತ ಕಲ್ಲವ್ವನ ಎದುರಿಗೆ ಕುಂತಿದ್ದ ನನಗಂತೂ ಆಕೆ ಎತ್ತರಕ್ಕೆ, ಎತ್ತರಕ್ಕೆ, ಮತ್ತೂ ಎತ್ತರಕ್ಕೆ, ಇನ್ನೇನು ಆಕೆ ಆಕಾಶವನ್ನು ತನ್ನ ಬೆರಳ ತುದಿಯಿಂದಲೇ ಮೀಟಿ ಬಿಡುತ್ತಾಳೆ ಎನ್ನುವಷ್ಟು ಎತ್ತರಕ್ಕೆ ಬೆಳೆದು ನಿಂತಿದ್ದಾಳೆ ಎಂದೆನಿಸಿ ಕಟಿಕಟಿ ಬೆವೆತು ಹೋದೆ!

●